ಶ್ರೀ ಎ.ಸ್.ಪಾಟೀಲ್ : ಮಾನ್ಯ ಅಧ್ಯಕ್ಷರೇ, ನಾನು ಒಂದು ವಿಚಾರವನ್ನು ಗಮನಕ್ಕೆ ತರುತ್ತೇನೆ. ಬಿಜಾಪುರ ಜಿಲ್ಲೆಯಲ್ಲಿ 13 ಸಮುದಾಯ ಆರೋಗ್ಯ ಕೇಂದ್ರಗಳನ್ನು ಮಾಡಿದ್ದಾರೆ, ಅಲ್ಲಿ ವಾಸ್ತವಿಕವಾಗಿ ಏನಾಗಿದೆ ಎಂದರೆ, ತಾವು 1,10,000 ಜನಸಂಖ್ಯೆ ಆಧಾರದ ಮೇಲೆ ಕೊಡುತ್ತೇವೆಂದು ಹೇಳಿದಿರಿ. ದೇವರ ಹಿಪ್ಪರಗಿಯಲ್ಲಿ ಹೋಬಳಿಯಲ್ಲಿ ಬರುವಂತಹ ಜನಸಂಖ್ಯೆ 2001ರ ಜನಗಣತಿ ಪ್ರಕಾರ ಸುಮಾರು 1,35,000 ಇದೆ, ತಾವು ಅದನ್ನು ತರಿಸಿ ನೋಡಬೇಕು. ಇದರ ಬಗ್ಗೆ ಒಂದು ವರ್ಷದಲ್ಲಿ ಎರಡು-ಮೂರು ಬಾರಿ ಪ್ರಸ್ತಾವನೆ ಬಂದಿದೆ. ಆ ಹೋಬಳಿಯಲ್ಲಿ ಸುಮಾರು 86,00,000 ಜನ ಮತದಾರರಿದ್ದಾರೆ, 1,35,000 ಜನಸಂಖ್ಯೆ ಇದೆ. ಏಕೆಂದರೆ ಬೇರೆ ಯಾವುದೋ ಒಂದು ಕ್ಷೇತ್ರದಲ್ಲಿ ನಾಲ್ಕು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವುದಕ್ಕೆ ಆಗುವುದಿಲ್ಲವೆನ್ನುವ ಕಾರಣವನ್ನು ಕೊಡುವುದಕ್ಕಾಗುವುದಿಲ್ಲ. ದಯಮಾಡಿ ಮಾನ್ಯ ಸಚಿವರು ಇದಕ್ಕೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಶ್ರೀರಾಮುಲು : ಮಾನ್ಯ ಅಧ್ಯಕ್ಷರೇ, ನಾವು ಏನೇ ಮಾಡಬೇಕಾದರೂ ಕೂಡ ಜಿಲ್ಲಾ ಜನಸಂಖ್ಯೆ ಆಧಾರದ ಮೇಲೆ ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರು ಏನು ಪ್ರಸ್ತಾವನೆಯನ್ನು ಸಭೆಯ ಮುಂದೆ ಇಟ್ಟಿದ್ದಾರೆ, ಅದರ ಬಗ್ಗೆ ನಾನು ಪುನಃ ಪರಿಶೀಲನೆಯನ್ನು ಮಾಡಬೇಕಾಗುತ್ತದೆ. ಅದರ ಬಗ್ಗೆ ನೋಡಿ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ.

ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ & ಇತರೆ ಸಿಬ್ಬಂದಿಗಳ ಕೊರತೆಯ ಬಗ್ಗೆ

4 (126) ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ)
ಶ್ರೀ ಶ್ರೀರಾಮರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಕರ್ನಾಟಕ ರಾಜ್ಯದಲ್ಲಿನ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ಮತ್ತು ವೈದ್ಯರೇತರ ಸಿಬ್ಬಂದಿಗಳ ಕೊರತೆಯ ಸಂಖ್ಯೆ ಎಷ್ಟು;

ಕರ್ನಾಟಕ ರಾಜ್ಯದಲ್ಲಿನ ಸರ್ಕಾರಿ ಆಸ್ಪತ್ರೆಗಳಲ್ಲಿ 1288 ವೈದ್ಯರ ಮತ್ತು 16,253 ವೈದ್ಯೇತರ ಸಿಬ್ಬಂದಿಗಳ ಕೊರತೆ ಇರುತ್ತದೆ.

ಆ) ಹಾಗಿದ್ದಲ್ಲಿ, ವೈದ್ಯರ ಮತ್ತು ಸಿಬ್ಬಂದಿಗಳ ಕೊರತೆ ಇದ್ದರೆ ಅವರನ್ನು ಭರ್ತಿ ಮಾಡಲು ಕೈಗೊಂಡ ತುರ್ತು ಕ್ರಮಗಳೇನು;

ಕರ್ನಾಟಕ ಲೋಕಸೇವಾ ಆಯೋಗದ ಮೂಲಕ 2008-09ನೇ ಸಾಲಿನಲ್ಲಿ 815 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ನೇಮಕಗೊಂಡಿದ್ದು ಇವರಲ್ಲಿ 685 ಮಂದಿ ವೈದ್ಯರು ಕಾರ್ಯವರದಿ ಮಾಡಿಕೊಂಡಿದ್ದಾರೆ. ಹಾಗೂ 130 ಮಂದಿ ವರದಿ ಮಾಡಿಕೊಂಡಿಲ್ಲ. ಇದಲ್ಲದೆ 182 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳು

ಖಾಲಿ ಇವೆ. ಮುಂದುವರೆದು, ಇಲಾಖೆಯಲ್ಲಿ 3101 ಹಿರಿಯ ತಜ್ಞರು/ತಜ್ಞರ ಹುದ್ದೆಗಳು ಮಂಜೂರಾಗಿದ್ದು 2124 ತಜ್ಞರು ಕಾರ್ಯ ನಿರ್ವಹಿಸುತ್ತಿದ್ದಾರೆ. ಹಾಗೂ 977 ತಜ್ಞ ಹುದ್ದೆಗಳು ಖಾಲಿ ಇವೆ. ಖಾಲಿ ಇರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ನೇಮಕ ಮಾಡಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ತಜ್ಞರ ಸೇವೆಯನ್ನು ಸಮಾಲೋಚನೆ ಆದಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ. ಇದಕ್ಕಾಗಿ ಎನ್.ಆರ್.ಹೆಚ್.ಎಂ. ಯೋಜನೆಯಡಿಯಲ್ಲಿ ರೂ.25,000 ದಿಂದ ರೂ.50,000 ದ ವರೆಗೆ ಗರಿಷ್ಟ ಮಾಸಿಕ ಗೌರವಧನ ನೀಡಲು ಅವಕಾಶ ಕಲ್ಪಿಸಲಾಗಿದೆ. ಮುಂದುವರೆದು, ಇಲಾಖೆಯಲ್ಲಿ ಒಟ್ಟು 5245 ವೈದ್ಯೇತರ ಹುದ್ದೆಗಳನ್ನು ವಿಶೇಷ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ.

ಇ) ತೀರ್ಥಹಳ್ಳಿ ವಿಧಾನ ಸಭಾಕ್ಷೇತ್ರದಲ್ಲಿನ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ಮತ್ತು ವೈದ್ಯರೇತರ ಸಿಬ್ಬಂದಿಗಳ ಕೊರತೆ ಎಷ್ಟಿಷ್ಟಿದೆ; ವಿವರ ನೀಡುವುದು;

ಸದರಿ ವಿಧಾನ ಸಭಾ ಕ್ಷೇತ್ರದಲ್ಲಿ ಈ ಕೆಳಕಂಡ ಆರೋಗ್ಯ ಕೇಂದ್ರಗಳಲ್ಲಿ ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇದೆ.

1. ಪ್ರಾ.ಆ.ಕೇಂದ್ರ ಆಗುಂಬೆ: 01
2. ಪ್ರಾ.ಆ.ಕೇಂದ್ರ ಮೇಗರವಳ್ಳಿ : 01
3. ಸಂಯುಕ್ತ ಆಸ್ಪತ್ರೆ ಕನ್ನಂಗಿ : 01

85 ಆರೆ ವೈದ್ಯಕೀಯ ಸಿಬ್ಬಂದಿಗಳು ಕೊರತೆ ಇರುತ್ತದೆ.

ಈ) ತೀರ್ಥಹಳ್ಳಿ ವಿಧಾನ ಸಭಾ ಕ್ಷೇತ್ರದ ಸರ್ಕಾರಿ ಆಸ್ಪತ್ರೆಗಳಲ್ಲಿನ ಕಟ್ಟಡಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಉ) ಹಾಗಿದ್ದಲ್ಲಿ ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು;

2009–10ನೇ ಸಾಲಿನಲ್ಲಿ 3 ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡಗಳನ್ನು ಅಂದರೆ, (1) ಗುತ್ತಿಎಡೆಹಳ್ಳಿ, (2) ಅಗರ ಮತ್ತು (3) ಕಟಗೂರು ಗಳಲ್ಲಿ ಕೈಗತ್ತಿಕೊಳ್ಳಲಾಗಿದೆ ಹಾಗೂ ಕಾಮಗಾರಿ ಕೆಲಸಗಳು ಪ್ರಗತಿಯಲ್ಲಿರುತ್ತದೆ.

ಊ) ತೀರ್ಥಹಳ್ಳಿ ವಿಧಾನ ಸಭಾಕ್ಷೇತ್ರದಲ್ಲಿರುವ ಅನೇಕ ಸರ್ಕಾರಿ ಆಸ್ಪತ್ರೆಯ ಕಟ್ಟಡಗಳು ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ

ಋ) ಹಾಗಿದ್ದಲ್ಲಿ ಈ ಕಟ್ಟಡಗಳ ದುರಸ್ಥಿಗಾಗಿ ತೆಗೆದುಕೊಂಡ ಕ್ರಮಗಳೇನು?

2008–09ನೇ ಸಾಲಿನಲ್ಲಿ ತೀರ್ಥಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿ 4 ಪ್ರಾಥಮಿಕ ಆರೋಗ್ಯ ಕೇಂದ್ರಗಳಾದ ದೇವಂಗಿ, ಕೋಣಂದೂರು, ಯಡೂರು ಮತ್ತು ಮುತ್ತೂರು ಕಟ್ಟಡಗಳ ದುರಸ್ತಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಹಾಗೂ

2009–10ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಕ್ರಿಯಾ ಯೋಜನೆ ಅಡಿಯಲ್ಲಿ ಉಪಕೇಂದ್ರಗಳಾದ ಹಾದಿಗಲ್ಲು, ಕೋಣಂದೂರು, ಕಟಗಾರು, ದೇವಂಗಿ, ಕನ್ನಂಗಿ, ರಂಜದ ಕಟ್ಟೆ, ಬಸವಾನಿ, ಬೆಸುಗೆ, ಚಿಕ್ಕಜೇನಿ ಮತ್ತು ಕೋಡೂರು ಕಟ್ಟಡಗಳ ದುರಸ್ತಿ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಅರಗ ಇಲ್ಲಿನ ವೈದ್ಯರ ವಸತಿ ಗೃಹದ ದುರಸ್ತಿ ಕಾರ್ಯವನ್ನು ಕೈಗೇತ್ತಿಕೊಳ್ಳಲಾಗಿದೆ.

ಶ್ರೀ ರಾಮಚಂದ್ರ ಗೌಡ : ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ಆರೋಗ್ಯ ಇಲಾಖೆಗೆ ಬರುತ್ತದೆ.

ಅಧ್ಯಕ್ಷರು : ಆರೋಗ್ಯ ಸಚಿವರೇ, ಈ ಪ್ರಶ್ನೆ ತಮಗೆ ಬರುತ್ತದೆಯೆಂದು ನೋಡಿ ಕಿಮ್ಮನೆ ರತ್ನಾಕರ್‌ರವರೇ ತಮಗೆ ಉತ್ತರ ಕೊಟ್ಟಿಲ್ಲ.

ಶ್ರೀ ಕಿಮ್ಮನೆ ರತ್ನಾಕರ್ : ಉತ್ತರ ಬಂದಿದೆ.

ಅಧ್ಯಕ್ಷರು : ಸದಸ್ಯರಿಗೆ ಉತ್ತರ ಬಂದಿದೆ. ಆರೋಗ್ಯ ಸಚಿವರು ಉತ್ತರ ಕೊಡಬೇಕು.

ಶ್ರೀ ಬಿ.ಶ್ರೀರಾಮುಲು : ವೈದ್ಯಕೀಯ ಶಿಕ್ಷಣ ಸಚಿವರಿಂದ ಉತ್ತರ ಬಂದಿದೆ. ನನಗೆ ಬಂದಿಲ್ಲ

ಅಧ್ಯಕ್ಷರು : ಈ ಪ್ರಶ್ನೆ ನಿಮಗೆ ಬಂದಿದೆ, ಇಲ್ಲಿ ಉತ್ತರ ಇದೆ.

ಶ್ರೀ ಬಿ.ಶ್ರೀರಾಮುಲು : ತಾವು ಪ್ರಶ್ನೆ ಕೇಳಿ.

ಶ್ರೀ ಕಿಮ್ಮನೆ ರತ್ನಾಕರ್ : ಮಾನ್ಯ ಅಧ್ಯಕ್ಷರೇ, ಉತ್ತರ ಅಪೂರ್ಣವಾಗಿದೆ. ಇದರಲ್ಲಿ ನಾನು ಏಳು ಪ್ರಶ್ನೆಗಳನ್ನು ಕೇಳಿದ್ದೆನು. ನಾನು ಮಾನ್ಯ ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ವಾಸ್ತವದಲ್ಲಿ ಕಟ್ಟಡಗಳು ಪ್ರಗತಿಯಲ್ಲಿದೆ ಎನ್ನುವ ಮಾತನ್ನು ಹೇಳಿದ್ದಾರೆ. ನಾನು ತೀರ್ಥಹಳ್ಳಿಯ ವಿಧಾನಸಭಾ ಕ್ಷೇತ್ರದ ಎಲ್ಲಾ ಕಟ್ಟಡಗಳ ಬಗ್ಗೆ ಪ್ರಶ್ನೆ ಮಾಡಿದ್ದೆನು. ಮಾನ್ಯ ಸಚಿವರಿಗೆ ಗೊತ್ತಿಲ್ಲ. ಯಡೂರು ನಕ್ಸಲ್ ಏರಿಯಾ. ಇತ್ತೀಚೆಗೆ ಅಲ್ಲಿ ಒಂದು ಘಟನೆ ನಡೆದಿದೆ. ಅಲ್ಲಿ ಒಂದು ಆಸ್ಪತ್ರೆ ಇದ್ದು, ಅದು ಉದ್ಘಾಟನೆಯಾಗಿ 15 ವರ್ಷವಾಗಿದೆ. ಅಲ್ಲಿ ಆರ್‌ಸಿಸಿ ಹಾಕಿದ್ದಾರೆ. ಅಲ್ಲಿ ಒಂದು ಆಸ್ಪತ್ರೆ ಇದೆ. ಇದು ಉದ್ಘಾಟನೆಯಾಗಿ 15 ವರ್ಷಗಳಾಗಿದೆ. ಈ ಆಸ್ಪತ್ರೆಗೆ ಆರ್‌ಸಿಸಿ ಹಾಕಿದ್ದಾರೆ. ಅದರಲ್ಲಿ ಜನರು ಇಸ್ಪೀಟ್ ಆಟವನ್ನು ಆಡುತ್ತಿದ್ದಾರೆ. ಇದಕ್ಕೆ ಇನ್ನೂ ಹಣ ಬಂದಿಲ್ಲ, ಈ ಕಟ್ಟಡಕ್ಕೆ ಇನ್ನೂ ಪ್ಲಾಸ್ಟರ್ ಆಗಿಲ್ಲ. ಇಲ್ಲಿ ಗಿಡಗಳು ಬೆಳೆದಿದೆ. ಈ ವಿಚಾರಗಳು ತಮ್ಮ ಗಮನಕ್ಕೆ ಬಂದಿದೆಯೋ, ಇಲ್ಲವೊ? ಇದನ್ನು ತಾವು ಸಿಪಡಿಸಲು ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ನಮ್ಮ ಕ್ಷೇತ್ರದಲ್ಲಿ ಐದು ಕಡೆಗಳಲ್ಲಿ ಆರೋಗ್ಯ ಘಟಕಗಳು ಇದ್ದವು. ಅವುಗಳು ಕೇಂದ್ರಗಳಾಗಿ ಪರಿವರ್ತನೆಯಾಗಿವೆ. ಇವುಗಳಿಗೆ ಯಾವುದಕ್ಕೂ ಕ್ವಾರ್ಟರ್ಸ್‌ಗಳಿಲ್ಲ. ಅವುಗಳು ಗುತ್ತಿಎಡೆಹಳ್ಳಿ, ಬಸವಾನಿ, ಯೋಗಿಮನಳ್ಳಿ, ಆರೋದಕೊಗೆ ಮತ್ತು ಕುಂಚದ ಕಟ್ಟೆ ಇವು ಯಾವುದಕ್ಕೂ ಕ್ವಾರ್ಟರ್ಸ್‌ಗಳಿಲ್ಲ.

ಶ್ರೀ ಬಿ.ಶ್ರೀರಾಮುಲು : ಮಾನ್ಯ ಅಧ್ಯಕ್ಷರೆ, ಈ ವಿಷಯವಾಗಿ ಸರಿಯಾದ ಮಾಹಿತಿ ನನ್ನ ಬಳಿ ಇಲ್ಲ. ಇದನ್ನು ನಾಳೆ ಬೆಳಿಗ್ಗೆ ತೆಗೆದುಕೊಂಡರೆ ವಿಷಯ ತಿಳಿದುಕೊಂಡು ಹೇಳುತ್ತೇನೆ.

ಅಧ್ಯಕ್ಷರು : ಆಯಿತು, ಮಾನ್ಯ ಕಿಮ್ಮನೆ ರತ್ನಾಕರ್‌ರವರೆ, ಈ ವಿಷಯವನ್ನು ಮುಂದಿನ ವಾರದಲ್ಲಿ ತೆಗೆದುಕೊಳ್ಳೋಣ.

ಶ್ರೀ ಬಿ.ಶ್ರೀರಾಮುಲು : ನಾಳೆ ಬೇಕಾದರೆ ಮುಂದುವರೆಸಿ, ನಾನು ವಿಷಯವನ್ನು ತಿಳಿದುಕೊಂಡು ಹೇಳುತ್ತೇನೆ. ಮುಂದಿನ ಸೋಮವಾರ ಬೇಕಾದರೆ ವಿಷಯವನ್ನು ಮುಂದುವರೆಸಿ, ನಾನು ಆಗ ಉತ್ತರ ಹೇಳುತ್ತೇನೆ.

ಶ್ರೀ ಆರ್.ರೋಷನ್‌ಬೇಗ್ : ಮಾನ್ಯ ಅಧ್ಯಕ್ಷರೆ, ಇದು ಒಂದು important ಪ್ರಶ್ನೆಯಾಗಿದೆ. ಈಗ ಪ್ರಶ್ನೆ ಏನೆಂದರೆ ಎಷ್ಟು shortage of doctors ಇದೆ ಎಂದು

ಅಧ್ಯಕ್ಷರು : ಇರಲಿ..

ಶ್ರೀ ಬಿ.ಶ್ರೀರಾಮುಲು : ಅದನ್ನು ಹೇಳುತ್ತೇನೆ.

ಶ್ರೀ ಆರ್.ರೋಷನ್‌ಬೇಗ್ : ಅದೇ reply ಆಗುವುದು.

ಶ್ರೀ ವಿ.ಎಸ್.ಆಚಾರ್ಯ : ಮಾನ್ಯ ಅಧ್ಯಕ್ಷರೆ, ನಮ್ಮ printed listನಲ್ಲಿ Medical Education ಎಂದು ಇತ್ತು.

ಶ್ರೀ ಬಿ.ಶ್ರೀರಾಮುಲು : ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಗೆ ನಾನು ಮುಂದಿನ ಗುರುವಾರದಂದು ಉತ್ತರ ಕೊಡುತ್ತೇನೆ. ಏನೂ ತೊಂದರೆ ಇಲ್ಲ, ಇದು ಎಲ್ಲೂ ಹೋಗುವುದಿಲ್ಲ.

ಅಧ್ಯಕ್ಷರು : ಮಾನ್ಯ ಕಿಮ್ಮನೆ ರತ್ನಾಕರ್‌ರವರೆ, ಮಾನ್ಯ ಮಂತ್ರಿಯವರು ವಿನಂತಿ ಮಾಡಿಕೊಳ್ಳುತ್ತಿದ್ದಾರೆ, ಮುಂದಿನ ವಾರ ಇದಕ್ಕೆ ಉತ್ತರ ಕೊಡುತ್ತಾರೆ.

ಶ್ರೀ ವಿ.ಎಸ್.ಆಚಾರ್ಯ : ಮಾನ್ಯ ಅಧ್ಯಕ್ಷರೆ, actually ಇದು Health and Family Welfareಗೆ ಇದೆ. ಅವರಿಗೆ ನೋಟೀಸ್ ಬರಲಿಲ್ಲ, ಹಾಗಾಗಿ ಮಂತ್ರಿಯವರು ಈ ಪ್ರಶ್ನೆಗೆ ಮುಂದಿನ ಗುರುವಾರ ಉತ್ತರವನ್ನು ಕೊಡುತ್ತಾರೆ.

ಅಧ್ಯಕ್ಷರು : ಮುಂದಿನ ವಾರ ಉತ್ತರ ಕೊಡಿಸುತ್ತೇನೆ. ಈ ಪ್ರಶ್ನೆಯನ್ನು held up ಮಾಡಿಸುತ್ತೇನೆ.

ಶ್ರೀ ಕಿಮ್ಮನೆ ರತ್ನಾಕರ್ : ಮಾನ್ಯ ಅಧ್ಯಕ್ಷರೆ, ತಾವು next time ಹೇಳುತ್ತೀರಿ. ಅದು ಮತ್ತೆ ಬರುವುದೇ ಇಲ್ಲ.

ಅಧ್ಯಕ್ಷರು : ಮಾನ್ಯ ಮಂತ್ರಿಯವರು, ಮಾಹಿತಿಯನ್ನು ತೆಗೆದುಕೊಳ್ಳಲಿ, ಇವತ್ತು ಅವರು ಮಾಹಿತಿ ತೆಗೆದುಕೊಂಡಿಲ್ಲವೆಂದು ಹೇಳುತ್ತಿದ್ದಾರೆ. ಅವರು request ಮಾಡಿಕೊಂಡಿದ್ದಾರೆ. ಈ ಪ್ರಶ್ನೆಯನ್ನು ಮುಂದಿನ ವಾರ ತೆಗೆದುಕೊಳ್ಳೋಣ.